ಇಂದು ದಿಃ04.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ. ಎಸ್.ಎನ್.ಜಿ ವಕೀಲರಿಂದಃ**

ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ನನ್ನ ಮಾವ ಜವರನಾಯಕ ತೀರಿಕೊಂಡಿದ್ದು ಪರಿಹಾರಕ್ಕಾಗಿ ಅರ್ಜಿ ಹಾಕಿದ್ದೇನೆ. ಲಕ್ಷ್ಮಮ್ಮ ತೀರಿಕೊಂಡಿರುವುದರಿಂದ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುವುದಾಗಿ ನನ್ನ ಅರ್ಜಿಯಲ್ಲಿ ಹೇಳಿಲ್ಲ. ಮೃತ ಜವರನಾಯಕ ನನ್ನ ತಾಯಿಯ ಅಣ್ಣ. ಸದರಿ ಜವರನಾಯಕರಿಗೆ ಹೆಂಡತಿ ಮತ್ತು ಮಕ್ಕಳು ಇರುವುದಿಲ್ಲ ಒಬ್ಬ ತಂಗಿ ಜವರಮ್ಮ ಇದ್ದಾರೆ. ಸದರಿ ಜವರಮ್ಮನವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಸೇರಿಸಲು ತೊಂದರೆ ಇರಲಿಲ್ಲ. ನಾನು ಮತ್ತು ಮೃತ ಜವರನಾಯಕ ಸಂಬಂಧಿಕರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ಮೃತ ಜವರನಾಯಕ ಮತ್ತು ನಾನು ಪರಸ್ಪರ ಅವಲಂಬಿತರೆಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಆ ರೀತಿ ದಾಖಲೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸ್ಕೂಟರ್ ಅಪಘಾತಪಡಿಸಿದೆ. ಅಪಘಾತಪಡಿಸಿದ ವಾಹನ ಯಾರ ಹೆಸರಿನಲ್ಲಿದೆ ಎಂದು ಗೊತ್ತಿಲ್ಲ. ಆ ವಾಹನ ಎದುರುದಾರನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿ ಅವರ ತಂದೆಯ ಹೆಸರಿನಲ್ಲಿದೆ. ಅಪಘಾತಪಡಿಸಿದ ವಾಹನದ ಮಾಲೀಕನಾದ ಎದುರುದಾರರ ತಂದೆಯನ್ನು ಈ ಕೇಸಿನಲ್ಲಿ ಸೇರಿಸಲು ತೊಂದರೆ ಇರಲಿಲ್ಲ. ಮೃತ ಜವರನಾಯಕರಿಗೂ ನನಗೆ ಯಾವುದೇ ಸಂಬಂಧವಿರಲಿಲ್ಲ ಆದರೆ ಪರಿಹಾರ ಪಡೆಯಲು ಸುಳ್ಳು ಅರ್ಜಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಮೃತ ಜವರನಾಯಕ ವ್ಯವಸಾಯ ಮಾಡುತ್ತಿದ್ದರು. ಅವರಿಗೆ ಜಮೀನು ಇರಲಿಲ್ಲ. ಮೃತ ಜವರನಾಯಕರ ಆದಾಯದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಾನು ಸಲ್ಲಿಸಿರುವ ಅರ್ಜಿ ಕಾನೂನಿನ ಪ್ರಕಾರ ಊರ್ಜಿತವಲ್ಲ

ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ**